**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 2565/2022**

**ಸಾಕ್ಷಿಗೆ ದಿನಾಂಕ 23.12.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಜ್ಯೋತಿ | ಪಿ.ಡಬ್ಲ್ಯೂ-1 |
| ತಂದೆಯ/ಗಂಡನ ಹೆಸರು | : | ನಿಂಗರಾಜು | ಸಿ.ಡಬ್ಲ್ಯೂ-1 |
| ವಯಸ್ಸು | : | 30 | |
| ಉದ್ಯೋಗ | : | ಗೃಹಿಣಿ | |
| ವಾಸಸ್ಥಳ | : | ಹೊಸಹಳ್ಳಿ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ನನ್ನ ಮಾವನಾಗಬೇಕು. 2 ನೇ ಆರೋಪಿ ನನ್ನ ಅತ್ತೆಯಾಗಿದ್ದು ಅವರು ಈಗ ತೀರಿಕೊಂಡಿರುತ್ತಾರೆ. ನಾನು 1 ನೇ ಆರೋಪಿಯ ಮಗನಾದ ನಿಂಗರಾಜು ರವರನ್ನು 2007 ರಲ್ಲಿ ಮದುವೆಯಾಗಿದ್ದು ಅವರು 2021 ರಲ್ಲಿ ಕೆರೆಗೆ ದನಗಳ ಮೈ ತೊಳೆಯಲು ಹೋದಾಗ ಮುಳುಗಿ ಮೃತಪಟ್ಟಿರುತ್ತಾರೆ. ನನ್ನ ಗಂಡ ಮೃತಪಟ್ಟ ನಂತರ ನಾನು ನನ್ನ ಗಂಡನ ಮನೆಯಲ್ಲಿ ಆರೋಪಿತರು ಹಾಗೂ ನನ್ನ ಅತ್ತಿಗೆಯಾದ ನೇತ್ರಾವತಿ ರವರ ಜೊತೆ 15 ದಿನಗಳ ಕಾಲ ಇದ್ದೆನು. ನನ್ನ ಗಂಡ ತೀರಿಕೊಂಡ 20 ದಿನಗಳ ನಂತರ ಒಂದು ದಿನ ಬೆಳಿಗ್ಗೆ ನಾನು ನನ್ನ ಗಂಡನ ಮನೆಯಲ್ಲಿದ್ದಾಗ ಆರೋಪಿತರು ನನ್ನ ಜೊತೆ ಜಗಳ ತೆಗೆದು ನನ್ನಿಂದಲೇ ನನ್ನ ಗಂಡ ತೀರಿಕೊಂಡಿರುತ್ತಾರೆ, ನನ್ನನ್ನು ಹಾಗೂ ನನ್ನ ಮಕ್ಕಳನ್ನು ಸಾಕಲು ದುಡಿಯುವವರು ಯಾರೆಂದು ಲೋಫರ್ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಸದರಿ ವಿಚಾರವನ್ನು ನನ್ನ ಮಗ ನನ್ನ ತಂದೆಗೆ ಹೇಳಿದ್ದು, ಅವರು ನನ್ನ ಗಂಡನ ಮನೆ ಹತ್ತಿರ ಬಂದಾಗ ಅವರಿಗೆ ಆರೋಪಿತರು ಹೊಡೆಯಲು ಬಂದಿರುತ್ತಾರೆ. ಆಗ ನಾನು ಬಿಡಿಸಲು ಹೋದಾಗ ನನ್ನ ಜುಟ್ಟನ್ನು ಹಿಡಿದು ಎಳೆದಾಡಿ ದೊಣ್ಣೆಯಿಂದ ಹೊಡೆದು ಕಲ್ಲು ಮಣ್ಣನ್ನು ನನಗೆ ಎರಚಿ ನನಗೆ ಅವಾಚ್ಯ ಶಬ್ದಗಳಿಂದ ಬೈದು ಮನೆಯಲ್ಲಿದ್ದರೆ ಸೀಮೆಣ್ಣೆ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆ. ನಂತರ ಗ್ರಾಮಸ್ಥರಾದ ಚಾಸ 2 ಮತ್ತು 4 ರವರು ಗಲಾಟೆಯನ್ನು ಬಿಡಿಸಿರುತ್ತಾರೆ. ನಂತರ ನನ್ನ ತಂದೆ ನನ್ನನ್ನು ಹೆಚ್.ಡಿ.ಕೋಟೆಯ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ. ನಂತರ ಊರಿನಲ್ಲಿ ಪಂಚಾಯಿತಿ ಮಾಡಲು

ಕರೆದಿದ್ದು ಆರೋಪಿಯು ಪಂಚಾಯಿತಿಗೆ ಬಾರದಿದ್ದರಿಂದ ಘಟನೆ ನಡೆದ ಒಂದು ವಾರದ ನಂತರ ದೂರನ್ನು ನೀಡಿರುತ್ತೇನೆ. ಸಾಕ್ಷಿದಾರರು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ1 ಎಂದು, ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು. ನಾನು ದೂರು ನೀಡಿದ ನಂತರ ಹೆಚ್.ಡಿ.ಕೋಟೆ ಪೋಲಿಸರು ಘಟನ ಸ್ಥಳಕ್ಕೆ ಭೇಟಿ ನೀಡಿ ನಾನು ತೋರಿಸಿದ ಘಟನ ಸ್ಥಳವನ್ನು ಪಂಚರಾದ ಚಾಸ2 ಮತ್ತು 3ರವರ ಸಮಕ್ಷಮ ಪರಿಶೀಲಿಸಿ ಕೃತ್ಯಕ್ಕೆ ಉಪಯೋಗಿಸಿದ ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡು ಬೆಳಿಗ್ಗೆ 11 ಗಂಟೆಯಲ್ಲಿ ಮಹಜರನ್ನು ಮಾಡಿರುತ್ತಾರೆ. ಸಾಕ್ಷಿದಾರರು ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ2 ಎಂದು, ಸಾಕ್ಷಿಯ ಸಹಿಯನ್ನು ನಿಪಿ2 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ದೊಣ್ಣೆಯಿಂದ ನನಗೆ ಹಲ್ಲೆ ಮಾಡಿರುತ್ತಾರೆ. ಅದನ್ನು ಎಂಓ 1 ಎಂದು ಗುರುತಿಸಲಾಯಿತು. ಘಟನೆಯ ವಿಚಾರವಾಗಿ ನನ್ನ ಮರು ಹೇಳಿಕೆಯನ್ನು ನೀಡಿರುತ್ತೇನೆ. ಈ ದಿನ ನ್ಯಾಯಾಲಯದ ಮುಂದಿರುವ 1ನೇ ಆರೋಪಿ ಹಾಗೂ ಮೃತ 2ನೇ ಆರೋಪಿ ಸದರಿ ಕೃತ್ಯವನ್ನು ಎಸಗಿರುತ್ತಾರೆ.

ಪಾಟೀಸವಾಲುಃ ಆರೋಪಿ ಪರ ವಕೀಲರು ಗೈರುಹಾಜರಾಗಿದ್ದು 100/- ರೂ. ಖರ್ಚಿನೊಂದಿಗೆ ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ